ಹಗುರಾದ, ಪರ್ಸಿಗೂ ಕೊಂಚ ಹಗುರವೆನ್ನಿಸುವ ನಾಲ್ಕಾರು ಕಿವಿಯೋಲೆ ಇಟ್ಟುಕೊಂಡಿದ್ದರೆ, ಕಚೇರಿಯಿಂದ ಬಂದೊಡನೆ ಎಲ್ಲಿ ಬೇಕೆಂದಲ್ಲಿ ತೆಗೆದಿಟ್ಟು (ಮತ್ತೆ ಮರೆಯುವ!), ರಾತ್ರಿಯೆಲ್ಲ ಕಿವಿಹಗುರಾಗಿ ಕಳೆಯುವ ಈ ಸ್ವಾತಂತ್ರ್ಯವನ್ನು ಚಿನ್ನದ ಕಿವಿಯೋಲೆ ಕೊಡುವುದೇ? ಹೀಗೆ ಭಾರವೆನ್ನಿಸಿದ ಒಂದೊಂದನ್ನೇ (ಸಂಬಂಧಗಳೂ ಸೇರಿದಂತೆ?) ಕಳಚಿಡುತ್ತ ಬಂದರೂ, ಹಣೆಗೆ ಬಿಂದಿ ಹಚ್ಚುವುದನ್ನು (ಬರಬರುತ್ತ ಬಿಂದಿಯ ಗಾತ್ರ ಚಿಕ್ಕದಾದರೂ) ಬಿಟ್ಟಿಲ್ಲ. ಯಾಕೆ ಬಿಟ್ಟಿಲ್ಲ ಅಥವಾ ಯಾಕೆ ಇದೊಂದನ್ನು ಹಿಡಿದುಕೊಂಡಿರುವೆ ಎಂದು ಕೇಳಿದರೆ ಖರೇ ನನಗೆ ಗೊತ್ತಿಲ್ಲ. ಈಗಿನ ಬಿಂದಿಗಳು ಹಣೆಯ ಮೇಲೆ ಇರುವುದೂ ಗೊತ್ತಾಗದಷ್ಟು ಹಗುರಾಗಿ ಇರುತ್ತದೆ, ನಿಜ. ಆದರೆ ಅದು ಅಲ್ಲಿದೆ ಎಂಬ ಭಾವ ನನ್ನ ತಲೆಮಾರಿನ ಕೆಲ ಹೆಂಗಸರಿಗಾದರೂ ಆವರಿಸಿಕೊಂಡಿರುತ್ತದೆ. ಎಂದೋ ಭಯಂಕರ ಅವಸರದಲ್ಲಿ ಹಾಗೆಯೇ ಹೊರಹೋದರೆ, ಆಮೇಲೆ ಹಣೆ ಮುಟ್ಟಿ ನೋಡಿಕೊಂಡಾಗ, ಏನೋ ಚೂರು ಬೋಳಾದಂತೆ ಅನ್ನಿಸುತ್ತದೆ.

ನಾನು ಈ ಮೊದಲು ಕೆಲಸ ಮಾಡುತ್ತಿದ್ದ ಸಂಸ್ಥೆಯಲ್ಲಿ ಟೆಕ್ಕಿ ಒಬ್ಬರಿದ್ದರು. ಆತ ತುಂಬ ಪ್ರತಿಭಾವಂತ, ಅಮೆರಿಕದಲ್ಲಿ ಕೆಲ ವರ್ಷ ಕೆಲಸ ಮಾಡಿ, ಕೆಲ ತಿಂಗಳುಗಳ ಹಿಂದಷ್ಟೇ ಇಲ್ಲಿಗೆ ಮರಳಿದ್ದ, ಮೆಲುಮಾತಿನ ಯುವಕ. ಕಚೇರಿಗೆ ನಾನು ಹೋಗುವ ಮೊದಲೇ ಬಂದಿರುತ್ತಿದ್ದ ಆತ ಯಾರಿಲ್ಲವೆಂದು ಕಿವಿಗೆ ಈಯರ್ ಫೋನ್ ಸಿಕ್ಕಿಸದೇ, ಶಾಸ್ತ್ರೀಯ ಸಂಗೀತವನ್ನು ಹಾಕಿಕೊಂಡು ಕೂತಿರುತ್ತಿದ್ದ. ಎಲ್ಲರೂ ಬರುವವರೆಗೂ ನಾವಿಬ್ಬರೇ ಮೆಲು ಸಂಗೀತ ಕೇಳುತ್ತ ಕೆಲಸ ಮಾಡುತ್ತಿರುತ್ತಿದ್ದೆವು. ನನಗೂ ಸಂಗೀತದ ಆಸಕ್ತಿಯಿದ್ದಿದ್ದರಿಂದ, ಆ ಕುರಿತು ಆಗೀಗ ಮಾತನಾಡುತ್ತಿದ್ದೆವು. ಕೆಲವೊಮ್ಮೆ ಎಕ್ಸೆಲ್ ಶೀಟಿನಲ್ಲಿ ಕೆಲಸ ಮಾಡುವಾಗ ಫಾರ್ಮುಲಾ ಬಳಸುವುದನ್ನು ಹೇಳಿಕೊಡುತ್ತಿದ್ದ, ನನ್ನ ಬರವಣಿಗೆಯ ಬಗ್ಗೆ ಕೇಳುತ್ತಿದ್ದ, ತನ್ನ ಪುಟ್ಟ ಮಗನ ಬಗ್ಗೆ ಹೇಳುತ್ತಿದ್ದ. ಇದನ್ನು ಬಿಟ್ಟರೆ ಕಾಸ್ಮೋಪಾಲಿಟನ್ ಸಂಸ್ಕೃತಿಯಲ್ಲಿ ಬೆಳೆದು, ಇಂಗ್ಲಿಷ್ ಮಾಧ್ಯಮದ ಅತ್ಯುತ್ತಮ ಶಾಲಾಕಾಲೇಜುಗಳಲ್ಲಿ ಓದಿದ, ನನಗಿಂತ ಸುಮಾರು ಹದಿನೈದು ವರ್ಷ ಚಿಕ್ಕವನಾದ ಆತನಿಗೂ ಮತ್ತು ಹಳ್ಳಿಯ ಮಡಿವಂತ ಕುಟುಂಬದಲ್ಲಿ ಬೆಳೆದು, ಕನ್ನಡ ಮಾಧ್ಯಮದ ಹಳ್ಳಿಯ ಸರ್ಕಾರಿ ಶಾಲೆ ಕಾಲೇಜುಗಳಲ್ಲಿ ಓದಿದ, ಅನಾಲಿಟಿಕ್ಸ್‌ನ ಗಂಧಗಾಳಿಯಿಲ್ಲದ ನನಗೂ ಮಾತನಾಡಲು ಸಮಾನ ವಿಷಯಗಳು ಹೆಚ್ಚೇನೂ ಇರುತ್ತಿರಲಿಲ್ಲ.

ಒಮ್ಮೆ ಹಾಗೆ ಬೆಳಗ್ಗೆ ನನ್ನನ್ನು ನೋಡುತ್ತಲೇ, ಅವನು, "ಹೇ ಸುಮಾ, ಯು ಫಾರ್ಗಾಟ್ ಟು ಪುಟ್...' ಎನ್ನುತ್ತ ತನ್ನ ಹಣೆಯ ಮೇಲೆ ಬೆರಳಿಟ್ಟು ತೋರಿಸಿದ. ನನಗೆ ಅಚ್ಚರಿಯೆನ್ನಿಸಿತು. ಆ ಒಂದೆರಡು ತಿಂಗಳುಗಳಲ್ಲಿ ನಾವೆಲ್ಲರೂ ತುಂಬ ಕೆಲಸದ ಒತ್ತಡದಲ್ಲಿದ್ದೆವು. ಎಷ್ಟೋ ಸಲ ಮನೆಗೆ ಅಡುಗೆ ಮಾಡಲು, ಮಲಗೇಳಲು ಮಾತ್ರ ಹೋಗುತ್ತಿರುವೆನಾ ಎಂದು ಅನುಮಾನ ಬರುತ್ತಿತ್ತು. ಹೀಗಾಗಿ ನಾನು ಬೆಳಗ್ಗೆ ಹೊರಡುವ ಅವಸರದಲ್ಲಿ ಬಿಂದಿಯಿಡಲೂ ಮರೆಯುತ್ತಿದ್ದೆ. ಹೀಗೆ ಮೂರು ನಾಲ್ಕು ಬಾರಿಯಾಯಿತು. ನಾವಿಬ್ಬರೇ ಬೆಳಗ್ಗೆ ಬೇಗ ಬರುತ್ತಿದ್ದೆವು ಮತ್ತು ನನ್ನನ್ನು ಪ್ರತೀದಿನ ಮೊದಲು ನೋಡುವವನೇ ಆತ. ನಾನು ಮೊದಲ ಸಲ ಅವನು ಹಾಗೆ ಹೇಳಿದಾಗ, ಇವನೂ ಕೂಡ 'ಆಹಾ, ಪುರುಷಾಕಾರಂ'ನ ಪ್ರತಿರೂಪ ಎಂದುಕೊಂಡೆ. ಆದರೆ ಚಿಂತನೆಯಲ್ಲಿ, ರೀತಿನೀತಿಯಲ್ಲಿ ನಿಜಕ್ಕೂ ಮುಕ್ತ ಮನಸ್ಸಿನ, ಪ್ರಗತಿಪರ ಚಿಂತನೆಯ, ಮಾತುಕತೆಯಲ್ಲಿ ಮುಗ್ಧತೆಯನ್ನು ತೋರುವ ಈತ ಹಾಗೆ ಇರಲು ಸಾಧ್ಯವಿಲ್ಲ ಎನ್ನಿಸಿತು. ಅಲ್ಲದೇ ಆತನ ಧ್ವನಿಯಲ್ಲಿ ಹಣೆಗಿಟ್ಟಿಲ್ಲ ಎಂಬ ಆರೋಪಿಸುವ ಧ್ವನಿಯಂತೂ ದೂರವುಳಿಯಿತು, ಯಾಕೆ ಇಟ್ಟಿಲ್ಲ ಎಂಬ ಕುತೂಹಲವೂ ಇರುತ್ತಿರಲಿಲ್ಲ. ಅವನಿಗೆ ಕೆಂಪು ಬಣ್ಣದ ಬಗ್ಗೆ ವಿಶೇಷ ಒಲವಿರುವುದನ್ನು ನಾನು